ಎನ್. ಜಗನ್ನಾಥ ಪ್ರಕಾಶ್

# ಸಿನಿಸಾಹಿತ್ಯದ ಪ್ರತಿಭೆ ಕಣಗಾಲ್ ಪ್ರಭಾಕರ ಶಾಸ್ತ್ರಿ



ಕಣಗಾಲ್ ಪ್ರಭಾಕರ ಶಾಸ್ತ್ರಿ– ಕಲಾವಿದರಾಗುವ ಕನಸಿನೊಂದಿಗೆ ರಂಗಭೂಮಿಗೆ ಪ್ರವೇಶಿಸಿ ಸಾಹಿತ್ಯ ರಚನೆಯಲ್ಲಿ ಯಶ ಕಂಡ ಅಪರೂಪದ ವ್ಯಕ್ತಿ.

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕು ಕಣಗಾಲು ಸಮೀಪದ ರಾಜನ ಬಿಲುಗುಳಿ ಪ್ರಭಾಕರ ಶಾಸ್ತ್ರಿಗಳ ಹುಟ್ಟೂರು. ಸಾಂಪ್ರದಾಯಿಕ ಶಿಕ್ಷಣವನ್ನು ಮನೆ ಹಿರಿಯರಿಂದಲೇ ಪಡೆದ ಪ್ರಭಾಕರ ಶಾಸ್ತ್ರಿಗಳು ಚಿಕ್ಕಂದಿನಿಂದಲೇ ರಂಗಭೂಮಿಯತ್ತ ಮುಖ ಮಾಡಿದ್ದಕ್ಕೆ ಮುಖ್ಯ ಕಾರಣ ಎಳೆಯ ವಯಸ್ಸಿನಲ್ಲಿ ನೋಡಲು ಆರಂಭಿಸಿದ್ದ ಬಯಲು ನಾಟಕಗಳು.

ಇವರ ದೊಡ್ಡ ಕುಟುಂಬಕ್ಕೆ ಆದಾಯದ ಮೂಲ ಕಡಿಮೆ. ಬಡತನದಿಂದ ಪಾರಾಗಲು ಮೊರೆ ಹೋಗಿದ್ದು ರಂಗಭೂಮಿಗೆ. ರಾಮನಾಥಪುರದಲ್ಲಿ ಮೊಕ್ಕಾಂ ಹೂಡಿದ್ದ ಪ್ರಸಿದ್ಧ ನಟ ಸಿ.ಬಿ. ಮಲ್ಲಪ್ಪನವರ ಕಂಪನಿಗೆ ಕಾಲಿಟ್ಟ ಪ್ರಭಾಕರ ಶಾಸ್ತ್ರಿ ಸಣ್ಣ ಪುಟ್ಟ ಪಾತ್ರಗಳನ್ನು ಮಾಡುತ್ತಿದ್ದರು. ನಂತರ ಲಕ್ಷ್ಮೀಸಾನಿ ಕಂಪನಿಯಲ್ಲಿ ಅನೇಕ ನಾಟಕಗಳಲ್ಲಿ ಬಾಲನಟರಾಗಿ ಕಾಣಿಸಿಕೊಂಡರು.

ತಾತ ಲಕ್ಷ್ಮೀನರಸಿಂಹಯ್ಯನವರಿಂದ ಕಲಿತಿದ್ದ ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಗಳು, ಚಿಕ್ಕಂದಿನಿಂದಲೇ ಪಡೆದಿದ್ದ ಸಂಗೀತ ಪಾಠ ಪ್ರಭಾಕರ ಶಾಸ್ತ್ರಿಗಳಿಗೆ ನಾಟಕ ರಂಗದಲ್ಲಿ ಗಟ್ಟಿಯಾದ ತಳಹದಿಯನ್ನು ಹಾಕಿಕೊಟ್ಟವು. ಕಲೆ ಮತ್ತು ನಾಟಕಗಳ ಬಗೆಗೆ ಹೆಚ್ಚಿನ ಒಲವು ಗಳಿಸಿಕೊಂಡ ಇವರು ಕಲಾವಿದರಾಗುವ ಆಸೆಪಟ್ಟರು. 'ಗಂಗೆ–ಗೌರಿ' ನಾಟಕದಲ್ಲಿ ನಾರದನ ಪಾತ್ರ ವಹಿಸಿ ಗಮನ ಸೆಳೆದರು. ವೃತ್ತಿ ರಂಗಭೂಮಿಯ ಅನೇಕ ಕಂಪನಿಗಳಲ್ಲಿದ್ದ ಶಾಸ್ತ್ರಿಗಳು ಗಮನ ಸೆಳೆಯುವ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದು ಲಕ್ಷ್ಮೀಸಾನಿ ಕಂಪನಿಯ ನಾಟಕಗಳಲ್ಲಿ. ಇಲ್ಲಿ ಇವರು ಕಾಳಿದಾಸ ನಾಟಕದಲ್ಲಿ ವಹಿಸುತ್ತಿದ್ದ ಭೋಜರಾಯನ ಪಾತ್ರದಿಂದ ಬಣ್ಣದ ಭೂಮಿಯಲ್ಲಿ ಗುರುತಿಸಲ್ಪಟ್ಟರು. ಎರಡೂವರೆ ದಶಕಗಳಲ್ಲಿ ಶಾಸ್ತ್ರಿಗಳು ಹಲವಾರು ಕಂಪನಿಗಳಲ್ಲಿ ಐವತ್ತಕ್ಕೂ ಹೆಚ್ಚು ವಿವಿಧ ಪಾತ್ರಗಳನ್ನು ನಿರ್ವಹಿಸಿದರು. ಸಿಕ್ಕ ಪಾತ್ರಗಳಿಗೆ ಜೀವ ತುಂಬಿದರು. ನಟನೆಗಿಂತ ಶಾಸ್ತ್ರಿಗಳಿಗೆ ಹೆಸರು ತಂದುಕೊಟ್ಟಿದ್ದು ಅವರು ರಚಿಸಿದ ಪರಿಣಾಮಕಾರಿ ಸಾಹಿತ್ಯ. ಅವರು ಬರೆದ ಸಂಭಾಷಣೆ, ಹಾಡುಗಳು ಬಹು ಜನಪ್ರಿಯವಾದವು.

ನಾಡಿನ ಪ್ರಸಿದ್ಧ ಸಾಹಿತಿಗಳ ಒಡನಾಟ ಅವರಿಗಿತ್ತು. ಅವರು ಅಲೆಮಾರಿಯಂತೆ ಸುತ್ತಾಡಿ ಜೀವನಾನುಭವ ಪಡೆದರು. ಅಭಿವ್ಯಕ್ತಿಯ ಮಾಧ್ಯಮವಾಗಿ ಬರವಣಿಗೆಯತ್ತ ವಾಲಿದರು. ಹಲವಾರು ನಾಟಕಗಳನ್ನು ರಚಿಸಿದರು. ಅವುಗಳಲ್ಲಿ 'ಸ್ವರ್ಣ ಸೀತಾ', 'ಪ್ರತಿಕಾರ', 'ಪ್ರಚಂಡ ರಾವಣ' ಮುಖ್ಯವಾದವು. 'ಪ್ರಚಂಡ ರಾವಣ' ನಾಟಕವಂತೂ ಕನ್ನಡ ರಂಗಭೂಮಿಯಲ್ಲಿ ಬಿರುಗಾಳಿ ಎಬ್ಬಿಸಿತು.

ನಿರಂತರ ತಿರುಗಾಟದ ಬದುಕಿನಲ್ಲಿ ಪ್ರಭಾಕರ ಶಾಸ್ತ್ರಿಗಳು ಆಗ ಬರುತ್ತಿದ್ದ ನಾಟಕಗಳಿಗಿಂತ